ವರ್ಡ್ಸ್ ಯಾರು, ಬ್ಯಾಕ್‌ವರ್ಡ್ಸ್ ಯಾರು ಎಂದು ನಮೂದು ಮಾಡಿದ್ದಾರೆ. ವರದಿಯ ಆಧಾರದ ಮೇಲೆ ನಾವು ಇವರಿಗೆ ಅರ್ಹತೆ ಇದ್ದರೆ ಸೇರಿಸುತ್ತೇವೆ ವರದಿಯಲ್ಲಿ ಈ ಜನಾಂಗ ಇಲ್ಲದಿದ್ದರೆ ಮತ್ತೆ ನಾವು ಇನ್‌ವೆಸ್ಟಿಗೇಟ್ ಮಾಡಿಸಿ ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಚಿಂತಾಮಣಿ ತಾಲೂಕಿನಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ನಿರ್ಮಿಸುವುದು

ಳಿಳಿ. ಶ್ರೀ ಚೌಡರೆಡ್ಡಿ (ಚಿಂತಾಮಣಿ).—ಗ್ರಾಮಾಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:—

(ಅ) ಚಿಂತಾಮಣಿ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಯ ಕಟ್ಟಡಗಳನ್ನು ಕಟ್ಟಲು ಸರ್ಕಾರ, ತಾಲ್ಲೂಕು ಅಭಿವೃದ್ಧಿ ಮಂಡಲಿ, ಗ್ರಾಮ ಪಂಚಾಯತಿ ಅಥವಾ ಜನ ಸಹಾಯದ ಸ್ಕೀಂನಿಂದ ಮಂಜೂರುಮಾಡಿ ಪ್ರಾರಂಭಿಸಲಾಗಿದ್ದ ಕಟ್ಟಡಗಳ ಸಂಖ್ಯೆ ಎಷ್ಟು;

(ಆ) ಇವುಗಳ ಪೈಕಿ ಎಷ್ಟು ಕಟ್ಟಡಗಳು ಪೂರ್ತಿಯಾಗಿವೆ;

(ಇ) ಯಾವ ಗ್ರಾಮಗಳಲ್ಲಿ ಸದರಿ ಸ್ಕೀಂ ಮಂಗಿದರೂ ಕೆಲವು ಕಟ್ಟಡಗಳು ಅಪೂರ್ಣವಾಗಿರಲು ಕಾರಣಗಳೇನು;

(ಈ) ಇದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಎಸ್. ರಾಚಯ್ಯ (ಗ್ರಾಮಾಭಿವೃದ್ಧಿ ಹಾಗ ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ೯೨.

(ಆ) ೭೯.

(ಇ) (೧) ನಂದನವನ, (೨) ಬ್ಯಾಲಹಳ್ಳಿ, (೩) ಗುಂಡ್ಲಹಳ್ಳಿ, (೪) ಸೀಕಲ್, (೫) ಗುಟ್ಟಪಾಳ್ಯ, (೬) ಚಿಕ್ಕಪುರ, (೭) ಯರ್ರಯ್ಯಗಾರ ಹಳ್ಳಿ, (೮) ಕೂಡಿಗಲ್, (೯) ಇರಗಂಪಲ್ಲಿ, (೧೦) ಕಾಪಲ್ಲಿ, (೧೧) ಹೊಸಹಂಡ್ಯ, (೧೨) ಯಾಗವ ಕೋಟೆ ಮತ್ತು (೧೩) ಬಚ್ಚ್ವಾರಹಳ್ಳಿ. ಈ ಗ್ರಾಮಗಳಲ್ಲಿ ಸದರಿ ಸ್ಕೀಂ ಮುಗಿದರೂ ಶಾಲಾ ಕಟ್ಟಡಗಳು ಅಪೂರ್ಣವಾಗಿರುತ್ತವೆ.

ಸ್ಥಳೀಯ ಮುಖಂಡರ ಹೊರತು ಬೇರೆಯವರು ಕಂಟ್ರಾಕ್ಟನ್ನು ವಹಿಸಿಕೊಳ್ಳಲು ಬಾರದೆ ಇರುವುದರಿಂದ ಕೆಲಸಗಳು ಅಪೂರ್ಣವಾಗಿರುತ್ತವೆ.

(ಈ) ಆದಷ್ಟು ಬೇಗ ಕಟ್ಟಡಗಳ ಕೆಲಸಗಳನ್ನು ಪೂರ್ತಿಗೊಳಿಸಲು ಕಂಟ್ರಾಕ್ಟರುಗಳಿಗೆ ನೋಟೀಸ್ ಜಾರಿ ಮಾಡಲಾಗಿದೆ.

ಶ್ರೀ ಚೌಡರೆಡ್ಡಿ.—ಸ್ವಾಮಿ, ಇದರಲ್ಲಿ ೧೩ ಶಾಲಾ ಕಟ್ಟಡಗಳು ಪೂರ್ಣವಾಗಿಲ್ಲ. ಈ ಶಾಲಾ ಕಟ್ಟಡಗಳನ್ನು ಏನು ಕಟ್ಟಬೇಕೆಂದು ಒಂದು ಸ್ಕೀಂ ಹಾಕಿಕೊಂಡಿದ್ದೀರಿ ಇದು ಮುಗಿದಿದೆ ಎಂದು ಹೇಳುತ್ತೀರಿ. ಈಗ ಅಪೂರ್ಣವಾಗಿರುವ ಶಾಲಾಕಟ್ಟಡಗಳನ್ನು ಪೂರೈಸುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

† ಶ್ರೀ ಎಸ್. ರಾಚಯ್ಯ.—ಈ ೧೩ ಶಾಲಾಕಟ್ಟಡಗಳನ್ನೂ ತೀವ್ರವಾಗಿ ಮುಗಿಸುವ ಕ್ರಮವನ್ನು ತೆಗೆದುಕೊಂಡಿದ್ದೇವೆ. ನನಗೆ ಬಂದಿರುವ ವರದಿಯ ಪ್ರಕಾರ ೩೧ನೇ ಮಾರ್ಚ್ ೧೯೭೬ರಲ್ಲಿ ಈ ಕೆಲಸವನ್ನು ಮುಗಿಸುತ್ತೆವೆಂದು ಹೇಳಿದ್ದಾರೆ. ಇದು ಬೇರೆ ಯಾವುದಾದರೂ ಕಾರಣದಿಂದ ನಿಧಾನವಾದರೆ ಆದಷ್ಟು ತೀವ್ರವಾಗಿ ಈ ಶಾಲಾಕಟ್ಟಡಗಳನ್ನು ಪೂರೈಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಚೌಡರೆಡ್ಡಿ.—ಸ್ವಾಮಿ, ಈ ಕೆಲಸಗಳು ಮಂಜೂರಾದುದು ಯಾವಾಗ ಮತ್ತು ಮುಗಿಯುವುದು ಯಾವಾಗ ಹೇಳುತ್ತೀರಾ ಸ್ವಾಮಿ?

ಶ್ರೀ ಎನ್. ರಾಚಯ್ಯ.—ನಂದನವನ ೧೯೬೭-೬೮, ಬ್ಯಾಲಹಳ್ಳಿ ೧೯೬೯-೭೦ ಗಂಡ್ಲಹಳ್ಳಿ ೧೯೭೦-೭೨, ಸೀಕಲ್ ೧೯೭೧-೭೨, ಗುಟ್ಟಪಾಳ್ಯ ೧೯೭೦-೭೨, ಚಿಕ್ಕಪುರ ೧೯೭೨-೭೩ ಹೀಗೆಯೇ ಉಳಿದವುಗಳೆಲ್ಲವೂ ೧೯೭೨-೭೩ರಲ್ಲಿ ಈ ಸ್ಕೀಂ ಪ್ರಾರಂಭವಾದುದು ೧೯೭೪-೭೫ರಲ್ಲಿ. ಇವೆಲ್ಲಾ ಪೂರೈಸಿದ ಕೂಡಲೇ ಸರ್ಕಾರದ ತೀಪ್ರ ಪರಿಶೀಲನೆಯಲ್ಲಿರುವುದು ಎಂದರೆ ಟೀಚರ್ಸ್ ಕ್ವಾರ್ಟರ್ಸ್ ಮತ್ತು ಶಾಲಾ ಕಟ್ಟಡಗಳನ್ನು ಸ್ಥಳೀಯವಾಗಿ ಸಿಕ್ಕತಕ್ಕ ವಸ್ತುಗಳನ್ನು ಉಪಯೋಗಿಸಿಕೊಂಡು ಸ್ಥಳೀಯ ಪಂಚಾಯ್ತಿಮೂಲಕವಾಗಿ ಅಥವಾ ಬಿ. ಡಿ. ಒ. ಮೂಲಕವಾಗಲಿ ಸುಲಭ ದರದಲ್ಲಿ ಕಟ್ಟಿಸಬೇಕು ಎನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ.

MADAM SPEAKER.—I will hold over Question No 476. If the Hon'ble Minister Comes in time, it has been taken up today itself.

Cement Factory at Chittapur

520. SMT VIJAYA DESAI (Chittapur).—Will the Minister for Industries and Parliamentary Affairs be pleased to state :—

(*a*) whether any representations have been made to the Government regarding commissioning of the Cement Factory at Chittapur in Gulbarga District ;

(*b*) if so the action taken by the Government in the matter ?

SRI M. VEERAPPA MOILY (Minister of State for Small Scale Industries) [on behelf of SRI S.M KRISHNA (Minister for Industries and Parliamentary Affairs)]

(*a*) Yes.

(*b*) Government's support will be available to any entrepreneur who comes forward to set up a Cement Factory at Chittapur.

SMT. VIJAYA DESAI.—Is not a fact that M/s. Modi and Company had come forward to start a Cement Factory at Chittapur?

†SRI M. VEERAPPA MOILY.—It is a fact that M/s. Modi Spinning and Weaving Mills had come forward to set up the Industry at Chittapur and they had applied on 9-8-1973 for industrial licence to establish and to manufacture cement with the installed capacity of 4 lakhs tonnes per annum but even through we have recommended the application on 8-2-1974 to the Government of India for the grant of industrial licence, the Government of India intimated us on 31-3-1975 that the applicants had withdrawn their application.

SMT. VIJAYA DESAI.—M/s. Ronak and Company wanted to set up a Cement Factory at Chittapur. May I know the type of negotiations held between the Hon'ble Minister for Industries and M/s. Ronak and Company.

SRI M. VEERAPPA MOILY.—We have been making efforts to see that some entrepreneur comes forward to establish a Cement Factory at Chittapur. The Karnataka State Industrial Investment Corpo-